ವಿಶ್ವವಿದ್ಯಾಲಯದಲ್ಲಿ ಪೊಲಿಟಿಕಲ್ ಸೈನ್ಸ್ ಪ್ರೊಫೆಸರ್ ಆದರು. ಭಾರತೀಯ ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಅಂಗವಾಗಿ 1998ರಲ್ಲಿ ಪದ್ಮವಿಭೂಷಣ ಗೌರವ ಪಡೆದ ಅವರು 2000ನೆಯ ಇಸವಿಯಲ್ಲಿ ತೀರಿಕೊಂಡರು. 2024ರಲ್ಲಿ ಕಣ್ಣನ್ ಅಯ್ಯರ್ ನಿರ್ದೇಶಿಸಿದ 'ಯೇ ವತನ್ ಮೇರೆ ವತನ್' ಸಿನಿಮಾ ಉಷಾ ಮೆಹ್ತಾ ಭಾಗಿಯಾಗಿದ್ದ ರೇಡಿಯೋ ಸಾಹಸವನ್ನು ತೆರೆಯ ಮೇಲೆ ತಂದಿತು. ಸಾರಾ ಅಲಿ ಖಾನ್ ಉಷಾ ಮೆಹ್ತಾ ಆಗಿ ನಟಿಸಿದರು.

ಉಷಾ ಮೆಹ್ತಾ ಬಂಧನದ ನಂತರ ರೇಡಿಯೋ ತಂಡದ ಇತರರ ಬಂಧನವೂ ಆಯಿತು. ಲೋಹಿಯಾ ಕೂದಲೆಳೆಯ ಅಂತರದಿಂದ ಪೊಲೀಸರಿಂದ ಪಾರಾದರು. ಒಂದು ಸಲ ಅರುಣಾ ಅಸಫ್ ಅಲಿ, ಅಚ್ಯುತ್ ಪಟವರ್ಧನ್, ಲೋಹಿಯಾ ಒಂದೇ ರೂಮಿನಲ್ಲಿದ್ದರು; ಪೊಲೀಸರು ಬರುವಷ್ಟರಲ್ಲಿ ಬಚಾವಾದರು. ಅಳಿದುಳಿದ ರೇಡಿಯೋ ಸಲಕರಣೆಗಳನ್ನು ಹೊತ್ತುಕೊಂಡು ಲೋಹಿಯಾ ಯಾವಯಾವುದೋ ಹೆಸರುಗಳಲ್ಲಿ, ಯಾವಯಾವುದೋ ವೇಷಗಳಲ್ಲಿ, ದೇಶದ ಯಾವಯಾವುದೋ ಮೂಲೆಯಲ್ಲಿರುತ್ತಿದ್ದರು.

ಲೋಹಿಯಾ ಹೋರಾಟ ಈ ಬಗೆಯಲ್ಲಿ ಸಾಗಿದ್ದಾಗ, ಭೂಗತ ಹೋರಾಟಕ್ಕೆ ಇನ್ನಷ್ಟು ಹೊಸ ಹೊಸ ಹಾದಿಗಳನ್ನು ಹುಡುಕಬೇಕೆಂದು ತುಡಿಯುತ್ತಿದ್ದ ಕ್ರಾಂತಿಕಾರಿ ಚೇತನವೊಂದು ಬಿಹಾರದ ದಟ್ಟ ಕಾಡು ಬೆಟ್ಟ ಗುಡ್ಡಗಳ ನಡುವೆ ಇದ್ದ ಹಜಾರಿಬಾಗ್ ಜೈಲಿನಲ್ಲಿ ಚಡಪಡಿಸುತ್ತಿತ್ತು. ಗಾಂಧೀಜಿಯ 'ಮಾಡು ಇಲ್ಲವೇ ಮಡಿ' ಕರೆ ತಲುಪಿದ ಮೇಲಂತೂ ಈ ಚೇತನ ಹಜಾರಿಬಾಗ್ ಜೈಲಿನಿಂದ ತಪ್ಪಿಸಿಕೊಳ್ಳಲು ವ್ಯವಸ್ಥಿತ ಯೋಜನೆ ರೂಪಿಸತೊಡಗಿತು. ಜೊತೆಯಲ್ಲಿದ್ದ ಸಮಾಜವಾದಿ ಸಂಗಾತಿ ರಮಾನಂದನ ಮಿಶ್ರ ಹಾಗೂ ಇನ್ನಿತರ ರಾಜಕೀಯ ಕೈದಿಗಳು ಈ ಅದಮ್ಯ ಚೇತನ ಜಯಪ್ರಕಾಶ ನಾರಾಯಣರ ಜೊತೆ ಕೈ ಜೋಡಿಸಿದರು. ದೀಪಾವಳಿ ಹಬ್ಬದ ದಿನ ಕತ್ತಲೆಯಿಂದ ಬೆಳಕಿನೆಡೆಗೆ ಜಿಗಿಯಲು ಈ ತಂಡ ಸಿದ್ಧವಾಯಿತು!

ಈ ಘಟ್ಟದ ವಿವರಗಳು ಡಿ.ಎಸ್. ನಾಗಭೂಷಣರ 'ಜಯಪ್ರಕಾಶ್ ನಾರಾಯಣ: ಒಂದು ಅಪೂರ್ಣ ಕ್ರಾಂತಿಯ ಕಥೆ' ಪುಸ್ತಕದಲ್ಲಿವೆ:

ಜೆ.ಪಿ. ತಂಡದವರು ತಮ್ಮ ಹಾಸಿಗೆಗಳ ಸುತ್ತ ಸೊಳ್ಳೆ ಪರದೆಗಳನ್ನು ಕಟ್ಟಿದರು; ದೂರದಿಂದ ನೋಡಿದವರಿಗೆ ಕೈದಿಗಳೆಲ್ಲ ಮಲಗಿದ್ದಾರೆ ಎನ್ನಿಸುವಂಥ ದೃಶ್ಯ ನಿರ್ಮಿಸಿದರು. ಕಾವಲುಗಾರರ ಗಮನವನ್ನು ಬೇರೆಡೆ ಸೆಳೆಯುವ ಕೆಲಸವನ್ನು ಕೆಲವರು ಆರಂಭಿಸಿದರು. ಕಾವಲುಗಾರರನ್ನು ಒಟ್ಟಿಗೇ ಕೂರಿಸಿಕೊಂಡು 'ದೀಪಾವಳಿ ಬಂದಿದೆಯೇ ಪ್ರಿಯೆ' ಎಂಬಂಥ ಪ್ರೇಮಗೀತೆಗಳನ್ನು ಹಾಡುತ್ತಾ, ವಕ್ರ ವಕ್ರವಾಗಿ ನರ್ತನ ಮಾಡುತ್ತಾ, ಆ ಕಾವಲುಗಾರರನ್ನು ನಗೆಗಡಲಲ್ಲಿ ಮುಳುಗಿಸಿದರು.

8 ನವಂಬರ್ 1942. ದೀಪಾವಳಿಯ ರಾತ್ರಿ ಹೊರ ಜಿಗಿಯಲು ಸಿದ್ಧರಾದ ತಂಡದವರು ಸದ್ದು ಮಾಡದೆ ಮೇಜೊಂದನ್ನು ತಂದು ಕಿಟಕಿಯ ಬಳಿ ಇರಿಸಿದರು. 17 ಅಡಿಯಿದ್ದ ಜೈಲಿನ ಗೋಡೆ ಹಾರಲು ಜೆ.ಪಿ.ಯವರ ಜೊತೆ ಉಳಿದ ಐವರು ಒಬ್ಬರ ಹೆಗಲ ಮೇಲೆ ಮತ್ತೊಬ್ಬರು ನಿಂತರು. ಒಂದಕ್ಕೊಂದು ಪಂಚೆ ಗಂಟು ಹಾಕಿ ಹಗ್ಗ ಮಾಡಿಕೊಂಡು ಹೊರ ಜಿಗಿದರು. ಹಜಾರಿಬಾಗ್ ಬಳಿಯ ಕಾಡು ಹೊಕ್ಕು ಅಪಾರ ನೋವು, ಕಷ್ಟ ಅನುಭವಿಸಿ ಪ್ರಯಾಸದಿಂದ ಪಾರಾದರು.

ರಾತ್ರೋರಾತ್ರಿ ಜೆ.ಪಿ. ಮತ್ತು ಗೆಳೆಯರು ಹಜಾರಿಬಾಗ್ ಜೈಲಿನಿಂದ ಹಾರಿ ಹೋದ ಸಾಹಸ ಇಡೀ ದೇಶದಲ್ಲಿ ರೋಮಾಂಚನದ ಅಲೆಯನ್ನೆಬ್ಬಿಸಿತು. ಆಡಳಿತ ಕಂಗಾಲಾಯಿತು. ಈ ಕೈದಿಗಳನ್ನು ಜೀವಸಹಿತ ಹಿಡಿಯಬೇಕು, ಇಲ್ಲಾ ಕೊಂದು ತರಬೇಕು ಎಂಬ ಆದೇಶ ಹೊರಡಿಸಿತು. ಕೈದಿಗಳ ಸುಳಿವು ಕೊಟ್ಟವರಿಗೆ ಐದು ಸಾವಿರ ರೂಪಾಯಿ ಬಹುಮಾನ ಹಾಗೂ ಜೆ.ಪಿ. ಸುಳಿವು ಕೊಟ್ಟವರಿಗೆ ಹತ್ತು ಸಾವಿರ ರೂಪಾಯಿ ಬಹುಮಾನ ಘೋಷಣೆಯಾಯಿತು.

ಹಜಾರಿಬಾಗ್ ಜೈಲಿನಿಂದ ಜೆ.ಪಿ. ಪಾರಾದ ಘಟನೆ ಅಷ್ಟೊತ್ತಿಗಾಗಲೇ ಕೊಂಚ ಉಸಿರು ಕಳೆದುಕೊಳ್ಳತೊಡಗಿದ್ದ ಆಗಸ್ಟ್ ಕ್ರಾಂತಿಗೆ ಮರು ಜೀವ ತುಂಬಿತು. ಈ ಘಟನೆ ಜನರ ಮನಸ್ಸಿನಲ್ಲಿ ಹುಟ್ಟಿಸಿದ ವಿಶೇಷ ಆಸಕ್ತಿ, ಹುಮ್ಮಸ್ಸು ಆಗಸ್ಟ್ ಕ್ರಾಂತಿಯ ಮತ್ತೊಂದು ಮುಖ್ಯ ಘಟ್ಟವಾಗಿತ್ತು. 'ಭಾರತದ ಜನತೆ ತೀರಾ ಉತ್ಸಾಹರಹಿತರಾಗಿದ್ದಾಗ, ನಿಷ್ಕ್ರಿಯವಾಗಿ, ನಿತ್ರಾಣರಾಗಿ, ಅಸಹಾಯಕರಾಗಿದ್ದಾಗ' ಜೆ.ಪಿ. ಮತ್ತು ಗೆಳೆಯರ ಹಜಾರಿಬಾಗ್ ಸಾಹಸದ ಘಟನೆ 'ಕಿಡಿಯಾಗಿ ಪ್ರಜ್ವಲಿಸಿದ್ದನ್ನು' ಲೋಹಿಯಾ ಗುರುತಿಸಿದರು.

ಜೈಲಿನಿಂದ ಪಾರಾದ ಜೆ.ಪಿ. ಬನಾರಸ್ ತಲುಪಿ ಅಲ್ಲಿ ಆಗಸ್ಟ್ ಕ್ರಾಂತಿಯ ಚಟುವಟಿಕೆಗಳಲ್ಲಿ ತೊಡಗಿದ್ದ ತಂಡವೊಂದನ್ನು ಸೇರಿಕೊಂಡರು. ತಂಡದ ನಾಯಕರ ನಿಲುವು ಒಪ್ಪಿಗೆಯಾಗದೆ ಮುಂಬೈ ತಲುಪಿದರು; ಪೊಲೀಸರು ಅಷ್ಟಾಗಿ ಅನುಮಾನಿಸದ ಯೂರೋಪಿಯನ್ ಗೆಳೆಯನೊಬ್ಬನ ಜೊತೆ ಉಳಿದರು. ಚಹರೆ ಬದಲಿಸಿಕೊಂಡು, ಮೇಹರಾಜ್ ಮೆಹತಾ ಎಂಬ ಹೆಸರಿಟ್ಟುಕೊಂಡರು. ಭೂಗತ ಚಳುವಳಿಗಿಳಿದರು.

ಈ ಕಾಲದಲ್ಲಿ ಜೆ.ಪಿ. ಲೋಹಿಯಾರನ್ನು ಭೇಟಿಯಾದಾಗ ಅಚ್ಯುತ್ ಪಟವರ್ಧನ್, ಅರುಣಾ ಅಸಫ್ ಅಲಿ, ದಿನಕರ್ ಕೂಡ ಸಿಕ್ಕರು. ಹೋರಾಟದ ಮುಂದಿನ ಹೆಜ್ಜೆಯ ಬಗ್ಗೆ ಚಿಂತನೆ ನಡೆಯಿತು. ಪೊಲೀಸ್ ಕೇಂದ್ರ ಕಚೇರಿಗಳ ಮೇಲೆ ದಾಳಿ ಮಾಡಿ, ಪ್ರಮುಖ ಫೈಲುಗಳನ್ನು ಸುಟ್ಟು ಬ್ರಿಟಿಷ್ ಆಡಳಿತವನ್ನು ಕಂಗಾಲಾಗಿಸಬೇಕು ಎಂದು ತಂಡ ತೀರ್ಮಾನಿಸಿತು.

ಕೆಲ ಕಾಲ ಮುಂಬೈ ಚಟುವಟಿಕೆಗಳಲ್ಲಿ ಪಾಲ್ಗೊಂಡ ಜೆ.ಪಿ., ಬ್ರಿಟಿಷ್ ಆಡಳಿತವನ್ನು ನಡುಗಿಸುವಂಥ ಏನನ್ನಾದರೂ ಮಾಡಬೇಕೆನ್ನಿಸಿ ಮತ್ತೆ ಭೂಗತರಾದರು. ಜೆ.ಪಿ. ಭೂಗತರಾದ ಕೆಲ ದಿನಗಳ ನಂತರ ಲೋಹಿಯಾಗೆ ಒಂದು ಸಂದೇಶ ತಲುಪಿತು; ಲೋಹಿಯಾ ನೇಪಾಳಕ್ಕೆ ಹೊರಟು ಬರಬೇಕೆಂಬ ಜೆ.ಪಿ. ಸೂಚನೆ ಆ ಸಂದೇಶದಲ್ಲಿತ್ತು.

ಜೆ.ಪಿ. ನೇಪಾಳ ತಲುಪಿದ ಕತೆಯೂ ಮಜವಾಗಿತ್ತು. ಬಿಹಾರದ ಸಹರ್ಸಾ ನಗರ ತಲುಪಿದ ಜೆ.ಪಿ. ನೇಪಾಳಕ್ಕೆ ನುಸುಳಲು ತೀರ್ಮಾನಿಸಿದರು. ಅಷ್ಟೊತ್ತಿಗಾಗಲೇ ಪೊಲೀಸರು ಜೆ.ಪಿ. ಮತ್ತವರ ಸಂಗಾತಿಗಳ ಜಾಡು ಹಿಡಿದು ಹೊರಟಿದ್ದರು. ಪೊಲೀಸರಿಗೆ ಮಂಕುಬೂದಿ ಎರಚಲು ಜೆ.ಪಿ. ವರನಂತೆ ಅಲಂಕಾರ ಮಾಡಿಕೊಂಡರು. ಅಚ್ಯುತ್ ಪಟವರ್ಧನರ ಸೋದರಿ ವಿಜಯಾ ಪಟವರ್ಧನ್ ಜೆ.ಪಿ.ಯ ತಂಡದಲ್ಲಿದ್ದರು. ವಿಜಯಾ ವಧುವಿನಂತೆ ಸಿಂಗಾರಗೊಂಡರು! ಜೆ.ಪಿ. –ವಿಜಯಾ ಮದುವೆಯ ದಿಬ್ಬಣ ಹೊರಟವರಂತೆ ಆನೆಯೇರಿ ನೇಪಾಳಕ್ಕೆ ಹೊರಟರು.

ಈ ನಡುವೆ ಬ್ರಿಟಿಷರು ಸೇನೆಯಿಂದ ಹೊರ ಹಾಕಿದ್ದ ಮಿಲಿಟರಿ ಅಧಿಕಾರಿಗಳು ನೇಪಾಳದ ಕಾಡುಗಳ ನಡುವೆ 'ಆಝಾದ್ ದಸ್ತಾ' ಅಥವಾ 'ಸ್ವಾತಂತ್ರ್ಯ ಪಡೆ' ಎಂಬ ಕ್ರಾಂತಿಕಾರಿ ಸಂಘಟನೆಯನ್ನು ಸ್ಥಾಪಿಸಿದ್ದರು; ಈ ಸಂಘಟನೆಯಲ್ಲಿದ್ದ ತರುಣರು ಆಧುನಿಕ ಶಸ್ತ್ರಾಸ್ತ್ರಗಳ ಬಳಕೆಯ ತರಬೇತಿ ಪಡೆಯುತ್ತಿದ್ದರು. ಜೆ.ಪಿ. ಈ ತಂಡವಿರುವಲ್ಲಿಗೆ ಬಂದು ತಲುಪಿದರು. ನಂತರ ಲೋಹಿಯಾ ತಮ್ಮ ರೇಡಿಯೋ ಸಲಕರಣೆಗಳನ್ನೂ ಹೊತ್ತುಕೊಂಡು ನೇಪಾಳದ ಹನುಮಾನ್ ನಗರಕ್ಕೆ 70 ಮೈಲು ದೂರದಲ್ಲಿ ಬೀಡುಬಿಟ್ಟಿದ್ದ ಆಝಾದ್ ದಸ್ತಾ ಸೇರಿಕೊಂಡರು.

ಲೋಹಿಯಾ, ಜೆ.ಪಿ. ನೇಪಾಳ ತಲುಪಿರುವ ಸುದ್ದಿ ಬ್ರಿಟಿಷ್ ಭಾರತದ ಪೊಲೀಸರಿಗೆ ತಲುಪಿತು. ಬ್ರಿಟಿಷ್ ಸರ್ಕಾರ ನೇಪಾಳ ಸರ್ಕಾರದ ಪೊಲೀಸರಿಗೆ ಸುದ್ದಿ ಮುಟ್ಟಿಸಿತು. ಲೋಹಿಯಾ ಮತ್ತೆ ಭೂಗತರಾದರು. ವಿಜಯಾ ಪೂನಾ ತಲುಪಿದರು. ಕೊನೆಗೂ ನೇಪಾಳದ ಪೊಲೀಸರು ಜೆ.ಪಿ., ಲೋಹಿಯಾ ಹಾಗೂ ಜೊತೆಗಿದ್ದ ಐವರನ್ನು ಬಂಧಿಸಿದರು. ಈ ರಾಜಕೀಯ ಕೈದಿಗಳನ್ನು ಕರೆದೊಯ್ಯಲು ಬ್ರಿಟಿಷ್ ಇಂಡಿಯಾದ ಪೊಲೀಸರು ನೇಪಾಳದ ಗಡಿಯತ್ತ ಹೊರಟರು. ನೇಪಾಳದ ಪೊಲೀಸರು ಕೈದಿಗಳನ್ನು ಬ್ರಿಟಿಷ್ ಪೊಲೀಸರಿಗೆ ಒಪ್ಪಿಸಲು ಹನುಮಾನ್ ನಗರಕ್ಕೆ ಕರೆ ತಂದು ಕಾವಲುಗಾರರ ಪಡೆಯ ಕೋಣೆಯೊಂದರಲ್ಲಿಟ್ಟರು.

ತಮ್ಮ ಬಂಧನದ ಸುದ್ದಿ ಆಝಾದ್ ದಸ್ತಾದ ಯೋಧರಿಗೆ ತಲುಪುವಂತೆ ಜೆ.ಪಿ. ನೋಡಿಕೊಂಡಿದ್ದರು. ಈ ಯೋಧರು ಬಂಧಿತ ತಂಡವನ್ನು ಪಾರು ಮಾಡಲು ತಯಾರಾಗಿ ರಾತ್ರಿಯ ಹೊತ್ತಿಗೆ ಹನುಮಾನ್ ನಗರದ ಕಾವಲು ಕೊಠಡಿಯ ಬಳಿ ಬಂದರು. ಪಹರೆಯಲ್ಲಿದ್ದ ಪೊಲೀಸರಿಗೆ ಇದ್ದಕ್ಕಿದ್ದಂತೆ ಗುಂಡಿನ ಸದ್ದು ಕೇಳಿಸಿತು. ಗುಂಡಿನ ಚಕಮಕಿಯ ನಂತರ ಕೊಠಡಿಯ ಒಳಗೆ ನುಗ್ಗಿದ ಆಝಾದ್ ದಸ್ತಾದ ಯೋಧರು ಮಲಗಿದ್ದವರನ್ನು ಎಬ್ಬಿಸಿ ಹೊರಡಿಸಿದರು; ಗಾಢನಿದ್ರೆಯಲ್ಲಿದ್ದ ಲೋಹಿಯಾ ತಮ್ಮ ಜೊತೆಗಾರರೇ ನಿದ್ರಾಭಂಗ ಮಾಡುತ್ತಿದ್ದಾರೆಂದು ರೇಗತೊಡಗಿದ್ದರು! ನಂತರ ಗಡಿಬಿಡಿಯಿಂದ ಎದ್ದು ಹೊರಗೋಡಿದರು.

ಆ ರಾತ್ರಿ ತಮ್ಮ ತಂಡ ಪೊಲೀಸ್ ಪಹರೆಯಿಂದ